

# ಸೂಪರ್ ಚೋಕರ್!



**ಕತ್ತನ್ನು ಬಿಗಿದಪ್ಪುವ ಚೋಕರ್ ಅಜ್ಜಿಯರ ಕಾಲದ ಗೆಜ್ಜೆಮಾಲಾಕ್‌ನ ಆಧುನಿಕ ರೂಪ. 'ಸಿಂಗಲ್ ಪೀಸ್ ಆರ್ನಮೆಂಟ್' ಆಗಿ ಆಭರಣ ಪ್ರಪಂಚದಲ್ಲಿ ಮಿಂಚುತ್ತಿರುವ ಚೋಕರ್, ಹಗುರವಾದ ಆಭರಣ ಧರಿಸಬೇಕು ಎಂದು ಬಯಸುವ ಮಹಿಳೆಯರ ಅಚ್ಚುಮೆಚ್ಚಿನ ಒಡವೆ.**

**■ ಯು. ಅನಂತ್**

ಒಂದೇ ಒಡವೆ ಆಗಿರಬೇಕು, ಕತ್ತಿನಲ್ಲಿ ಎದ್ದು ಕಾಣಬೇಕು, ಉಡುಪಿಗೆ ಒಡವೆ ಮ್ಯಾಚ್ ಆಗಬೇಕು, ಹಗುರವಾಗಿರಬೇಕು, ಚೆನ್ನಾಗಿಯೂ ಕಾಣಬೇಕು... ಮಹಿಳೆಯರ ಒಡವೆ ಮೋಹಕ್ಕೆ ಕಾರಣಗಳು ಒಂದೇ ಎರಡೇ? ಈ ಎಲ್ಲ ಆಸೆಗಳನ್ನು ಈಡೇರಿಸುವ ಸುಂದರ ಒಡವೆ ಎಂದರೆ ಅದು ಚೋಕರ್.

ನೆಕ್ಲೇಸ್ ಅನ್ನೇ ಹೋಲುವ, ಆದರೆ ಕುತ್ತಿಗೆಗೆ ಫಿಟ್ ಆಗಿರುವ ಆಭರಣವಿದು. ಗಾಢ ಬಣ್ಣದ ರೇಷ್ಮೆ ಸೀರೆ ಮೇಲೆ ಒಂದೇ ಒಂದು ಚೋಕರ್ ಸಖತ್ ಲುಕ್ ಕೊಡುತ್ತದೆ. ಈ ಚೋಕರ್‌ನಲ್ಲಿ ಹಲವು ವೈವಿಧ್ಯವಿದೆ.

ಚಿನ್ನದ ಮೇಲೆ ಕುಂದನ್, ಹರಳು, ಮುತ್ತು, ಕೆಂಪು, ಜೇಡ್, ಮುತ್ತುಗಳನ್ನು ಕೂರಿಸಿ ಮಾಡಿದ ಚೋಕರ್‌ಗಳು ಈಗ ಟ್ರೆಂಡ್ ಸೃಷ್ಟಿಸಿವೆ. ಹಿಂದೆ ಅಜ್ಜಿಯರು ತೊಡುತ್ತಿದ್ದ ಗೆಜ್ಜೆಮಾಲಾಕ್ ಇಂದಿನ ಚೋಕರ್ ಆಗಿ ಮರುನಾಮಕರಣಗೊಂಡು ಫ್ಯಾಷನಬಲ್ ಆಗಿ ಗಮನಸೆಳೆಯುತ್ತಿವೆ. ಅಂದು ಗೆಜ್ಜೆಮಾಲಾಕ್ ಬಳಸುತ್ತಿದ್ದುದು ಮದುವೆಯಂತಹ ಶುಭ ಸಮಾರಂಭಕ್ಕೆ ಮಾತ್ರ. ಆದರೆ ಇಂದು ಮಾಮೂಲಿ ದಿನಗಳಲ್ಲೂ ಚೋಕರ್ ಶೋಭಿಸುತ್ತಿದೆ.

'ಸಿಂಗಲ್ ಪೀಸ್ ಆರ್ನಮೆಂಟ್' ಎಂದೇ ಆಭರಣ ಪ್ರಪಂಚದಲ್ಲಿ ಗುರುತಿಸಿರುವ ಚೋಕರ್ ಇಂದಿನ ಲೇಟೆಸ್ಟ್ ಫ್ಯಾಷನ್‌ಗೆ ಸರಿಯಾಗಿ ಹೊಂದುಕೊಳ್ಳುತ್ತದೆ. ಸೀರೆ, ಕುರ್ತಾ, ಸಲ್ವಾರ್, ಗಾಗ್ರಾ... ಹೀಗೆ ಯಾವುದೇ ವಿಧದ ಉಡುಪಿಗೂ ಅಂದ ಕಾಣುವ ಚೋಕರ್ ಮಹಿಳೆಯರ ಮೆಚ್ಚು ಕೂಡ ಆಗಿದೆ.

ಮಹಿಳೆಯರು ಅವರವರ ದೇಹ ಪ್ರಕೃತಿಗೆ ಅನುಗುಣವಾಗಿ ಚೋಕರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕತ್ತು ಉದ್ದ ಇದ್ದರೆ ಅಂಥವರಿಗೆ ಮುತ್ತು ರತ್ನಗಳಿಂದ ಕೂಡಿದ ಚೋಕರ್ ಚೆನ್ನಾಗಿ ಕಾಣುತ್ತದೆ. ತೆಳ್ಳಗೆ ಇರುವವರೂ ಇದೇ ರೀತಿಯ ಚೋಕರ್ ಆಯ್ದುಕೊಳ್ಳಬಹುದು. ದಪ್ಪ ಇರುವವರು ಸಪೂರವಾಗಿರುವ ಚೋಕರ್ ಧರಿಸಿದರೆ ಚೆನ್ನಾಗಿರುತ್ತದೆ. ಮುಖ ಅಗಲ ಇರುವ ಮಹಿಳೆಯರು ಯಾವುದೇ ರೀತಿಯ ಚೋಕರ್‌ಗಳನ್ನೂ ಆಯ್ದುಕೊಳ್ಳಬಹುದು.

'ಉಡುಪಿಗೆ ತಕ್ಕ ಒಡವೆ' ಎಂಬ ತತ್ವಕ್ಕೆ ಬದ್ಧವಾಗಿರುವ ಸೂಕ್ತವಾದ ಚೋಕರ್‌ಗಳು ಬರೀ ಚಿನ್ನದಿಂದ ಮಾಡಿದ್ದಷ್ಟೇ ಅಲ್ಲದೆ ದುಬಾರಿ ಹರಳುಗಳಾದ ಎಮರಾಲ್ಡ್, ರೂಬಿ, ಮುತ್ತು ಹವಳಗಳಿಂದ ಮಾಡಿದ್ದು ಕೂಡ ಲಭ್ಯ. ಇವೆಲ್ಲದರ ಜತೆಗೆ ಕರಿಮಣಿಗಳಿಂದ ಪೋಣಿಸಿದ ಆ್ಯಂಟಿಕ್ ಆಭರಣಗಳೂ ಲಲನೆಯರ ಕುತ್ತಿಗೆಯಲ್ಲಿ ಮೆರೆದಾಡುತ್ತಿದೆ.

## ರೂಬಿ ಚೋಕರ್

ರೂಬಿ ಅಳವಡಿಸಿ ಅಗಲವಾಗಿ ಹೆಣೆದಿರುವ ಚೋಕರ್ ತುಂಬ ಚೆನ್ನಾಗಿ ಕಾಣುತ್ತದೆ. ಇದು ಕೊರಳಿನಿಂದಾಗಿ ಲೆಹಂಗಾದ ರವಿಕೆಯ ನೆಕ್‌ವರೆಗೆ ಇರಲಿ. ಇದಕ್ಕೆ ಮ್ಯಾಚ್ ಆಗಿರುವ ಕಿವಿಯೋಲೆ ಧರಿಸಿದರೆ ಪರ್ಫೆಕ್ಟ್ ಆಗಿ ಶೋಭಿಸಬಹುದು. ■